Statement made by Chief Minister

re: Death of the **Sadhu** *in Police Custody*

ಶ್ರೀ ಆರ್. ಗುಂಡೂರಾವ್.--ಮಾನ್ಯ ಅಧ್ಯಕ್ಷರೇ, ಬೆಂಗಳೂರು ಶ್ರೀ ರಾಮಪುರದ ಭಂಗೀ ಮಂಟಪದ ಸಾಧು ಲಕ್ಷ್ಮಣಗಿರಿಯ ಸಾವಿನ ಬಗ್ಗೆ ಬೆಂಗಳೂರು ಜಿಲ್ಲಾ ನ್ಯಾಯಾಧೀಶರ ವರದಿ ಸರ್ಕಾರದ ಕೈ ಸೇರಿದೆ. ಡಾ: ಚಂದ್ರೇಗೌಡ ಮತ್ತು ಡಾ: ಹೆಚ್. ಎ. ಸೋಮಯ್ಯ ಇವರುಗಳು ಸಲ್ಲಿಸಿದ ಮರಣೋತ್ತರ ವರದಿಗಳಲ್ಲಿ ಸ್ವಲ್ಪ ವ್ಯತ್ಯಾಸಗಳು ಇರುವುದರಿಂದ ಸರ್ಕಾರವು ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ದರ್ಜೆಯ ನ್ಯಾಯಾಂಗ ಅಧಿಕಾರಿಯ ಮೂಲಕ ಸಾಧು ಲಕ್ಷ್ಮಣಗಿರಿಯ ಸಾವಿನ ಕಾರಣದ ಬಗ್ಗೆ ನ್ಯಾಯಾಂಗ ತನಿಖೆ ನಡೆಸಲು ನಿರ್ಧರಿಸಿದೆ. ಇದಕ್ಕೋಸ್ಕರ ಓರ್ವ ಜಿಲ್ಲಾ ಸೆಷನ್ಸ್ ನ್ಯಾಯಾಧೀಶರ ಸೇವೆಯನ್ನು ಸರ್ಕಾರಕ್ಕೆ ಒದಗಿಸಿಕೊಡಲು ಕರ್ನಾಟಕ ಶ್ರೇಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರನ್ನು ಕೋರಲು ಉದ್ದೇಶಿಸಲಾಗಿದೆ.

ಈ ಕಾರಣದಿಂದ ಈ ವಿಚಾರದಲ್ಲಿ ಏನೇ ಚರ್ಚೆ ಆದರೂ ತನಿಖೆ ಬಗ್ಗೆ ಪ್ರೆಜುಡೀಸ್ ಆಗಬಹುದು. ನ್ಯಾಯಾಂಗ ತನಿಖೆಯ ವರದಿ ಬಂದಾಗ ಅದನ್ನು ಸದನದ ಮುಂದೆ ಇಡಲಾಗುವುದು.

ಶ್ರೀ ಎಂ. ಚಂದ್ರಶೇಖರ್.—ಈ ಘಟನೆ ಸಂಬಂಧವಾಗಿ ಪೋಲೀಸ್ ಅಧಿಕಾರಿಯೊಬ್ಬರ ಮೇಲೆ ಕ್ರಮ ತೆಗೆದುಕೊಳ್ಳಲಾಗಿದೆ. ಆದರ ಬಗ್ಗೆ ಏನು ಮಾಡುತ್ತೀರಿ?

Grant of a House site to Prakash Padukone.

ಶ್ರೀ ಆರ್. ಗುಂಡೂರಾವ್.—ಅದರ ಬಗ್ಗೆ ಈಗ ವಿಚಾರ ಮಾಡುವುದು ಬೇಡ. ಮಾನ್ಯ ಅಧ್ಯಕ್ಷರೇ, ನಾನು ಇನ್ನೊಂದು ಹೇಳಿಕೆಯನ್ನು ಕೊಡಬಯಸುತ್ತೇನೆ. ಮೊನ್ನೆ ತಾನೆ ಲಂಡನ್‌ನಲ್ಲಿ ನಡೆದ ಬ್ಯಾಡ್ಮಿಂಟನ್ ಪಂದ್ಯದಲ್ಲಿ ಕರ್ನಾಟಕದ ಪ್ರಕಾಶ್ ಪಡುಕೋಣೆಯವರು ಅತ್ಯಂತ ಶ್ರೇಷ್ಠಮಟ್ಟದ ಪ್ರದರ್ಶನ ನೀಡಿ ಇಡೀ ವಿಶ್ವದ ಚಾಂಪಿಯನ್‌ಷಿಪ್ ಪಡೆದವರನ್ನು ಸೋಲಿಸಿ ಭಾರತಕ್ಕೆ ಆದರಲ್ಲೂ ಕರ್ನಾಟಕಕ್ಕೆ ವಿಶೇಷವಾದ ಕೀರ್ತಿಯನ್ನು ತಂದಿದ್ದಾರೆ. ಈ ಒಂದು ಸವಿನೆನಪಿಗಾಗಿ ಬೆಂಗಳೂರು ನಗರದಲ್ಲಿ ವಸತಿ ಕಟ್ಟುವುದಕ್ಕಾಗಿ ಒಂದು ನಿವೇಶನವನ್ನು ಬಳುವಳಿಯಾಗಿ ನೀಡಲು ಸರ್ಕಾರ ತೀರ್ಮಾನ ಮಾಡಿದೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಮುಖ್ಯ ಮಂತ್ರಿಗಳು ಮಾಡಿರುವ ಘೋಷಣೆಯನ್ನು ನಾನು ಹೃದಯಪೂರ್ವಕವಾಗಿ ಸ್ವಾಗತಿಸುತ್ತೇನೆ. ಮತ್ತು ಶ್ರೀ ಪ್ರಕಾಶ್ ಪಡುಕೋಣೆಯವರನ್ನು ಅಭಿನಂದಿಸುವುದರಲ್ಲಿ ಅವರನ್ನು ಜೊತೆಗೂಡುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ವಿರೋಧ ಪಕ್ಷದ ನಾಯಕರಾಗಿದ್ದಾಗ, ಶ್ರೀ ಪ್ರಕಾಶ್ ಪಡುಕೋಣೆಯವರಿಗೆ ಅನುಕೂಲವಾಗುವ ರೀತಿಯಲ್ಲಿ ಒಂದು ಇಂಡೋರ್ ಸ್ಟೇಡಿಯಂ ನಿರ್ಮಿಸಲು ಮನಸ್ಸು ಮಾಡಬೇಕೆಂದು ಸಲಹೆ ಮಾಡಿದ್ದರು. ಆದರೆ, ಇವತ್ತಿನವರೆಗೂ ಶ್ರೀ ಪ್ರಕಾಶ್‌ಪಡುಕೋಣೆಯವರನ್ನು ಪೋಷಿಸಿಕೊಂಡು ಬಂದ ಕೆನರಾ ಯೂನಿಯನ್ ಎಂಬ ಸಂಸ್ಥೆ ಈ ಬಗ್ಗೆ ಪ್ರಪೋಸಲ್ ಕೊಟ್ಟು ಅದೀಗ ಸರ್ಕಾರದ ಹಣಕಾಸು ಮತ್ತು ಯುವಜನ ಸೇವಾ ಇಲಾಖೆಗಳಲ್ಲಿ ಓಡಾಡುತ್ತಿದೆ. ಆದುದರಿಂದ, ಮಾನ್ಯ ಮುಖ್ಯ ಮಂತ್ರಿಗಳು ದೊಡ್ಡ ಮನಸ್ಸು ಮಾಡಿದರೆ ಇದೊಂದು ಕ್ಷಣದ ವಿಚಾರ.....

ಶ್ರೀ ಆರ್. ಗುಂಡೂರಾವ್.—ಮಾನ್ಯ ಅಧ್ಯಕ್ಷರೇ, ಅವರು ದೊಡ್ಡ ಮನಸ್ಸು ಮಾಡಿದ್ದರೆ ಅವತ್ತೇ ಆಗುತ್ತಿತ್ತು ; ಅವರು ಮಾಡಲಿಲ್ಲ. ನಾನು ವಿರೋಧ ಪಕ್ಷದ ನಾಯಕನಾಗಿದ್ದಾಗ ಸಲಹೆ ಮಾಡಿದ್ದನ್ನು ಅವರು ಕಾರ್ಯಗತ ಮಾಡಲಿಲ್ಲ. ನಾನದನ್ನು ಈಗ ಮಾಡುತ್ತೇನೆ.

SRI A. LAKSHMISAGAR.—It is true that at one point of time in the context of the development of the case and also other matters related to that, we had demanded a judicial enquiry into the whole affair. Now that stage, according to me, is over. This is because of the following reasons :